ಕುಲಶೇಖರ: ಸಾಂಸ್ಕೃತಿಕ ಸಿಂಚನ- 2014

ಸಾಂಸ್ಕೃತಿಕ ಸಿಂಚನ 2014
JEETH Sounds

ಮಂಗಳೂರು, ನ. 1: ಶ್ರೀ ಧರ್ಮ ಶಾಸ್ತಾ ಭಜನ ಮಂದಿರ ಜ್ಯೋತಿನಗರ ಕುಲಶೇಖರ ಇದರ ವತಿಯಿಂದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ಸಾಂಸ್ಕೃತಿಕ ಸಿಂಚನ ಕಾರ್ಯಕ್ರಮ ನಡೆಯಿತು.

ಹಿರಿಯ ನ್ಯಾಯವಾದಿ ಆಶಾ ನಾಯಕ್ ಅವರು ಸಭಾಧ್ಯಕ್ಷತೆ ವಹಿಸಿದ್ದರು. ಕುಡುಪು ಕೆ.ಎಚ್‌ಬಿ ಕಾಲನಿ ಮಾಲಕರ ಸಂಘದ ಅಧ್ಯಕ್ಷ ಜನಾರ್ದನ ಬಾಬು, ಮಾಧ್ಯಮ ಪ್ರಮುಖರಾದ ಪ್ರವೀಣ್ ತಾವ್ರೊ, ಸಿವಿಲ್ ಎಂಜಿನಿಯರ್ ಸತೀಶ್ ಕುಮಾರ್, ಉದ್ಯಮಿ ಜಗದೀಶ್ ಕೆ. ಮುಖ್ಯ ಅತಿಥಿಗಳಾಗಿದ್ದರು. ದಯಾನಂದ ಕತ್ತಲ್‌ಸಾರ್ ಅವರು ಪ್ರಮುಖ ಭಾಷಣ ಮಾಡಿದರು. ನೀತಾ ಅಶೋಕ್, ಕೃಷ್ಣಪ್ಪ ಟೈಲರ್, ಹರೀಶ್ ಉಪಸ್ಥಿತರಿದ್ದರು.

ಕಾರ್ಯದರ್ಶಿ ಮಹಲಿಂಗೇಶ್ವರ ಭಟ್ ಸ್ವಾಗತಿಸಿದರು. ಅಧ್ಯಕ್ಷ ರಾಮಪ್ರಸಾದ್ ಪ್ರಸ್ತಾವಿಸಿದರು. ಅರುಣ್ ಕುಮಾರ್ ವಂದಿಸಿದರು.

ರಾಷ್ಟ್ರೀಯ ಸೇವಾ ಯೋಜನೆ: ವಾರ್ಷಿಕ ಶಿಬಿರ

ಮಂಗಳೂರು, ನ. 1: ನಗರದ ಹೊರವಲಯದ ಮೇರ್ಲಪದವು ಸೈಂಟ್ ಲಿಗೋರಿಸ್ ಹಿಪ್ರಾ ಶಾಲೆಯಲ್ಲಿ ನಡೆದ ಮಿಲಾಗ್ರಿಸ್ ಪಪೂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವಾರ್ಷಿಕ ವಿಶೇಷ ಶಿಬಿರವನ್ನು ನೀರುಮಾರ್ಗ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಚಂದ್ರಹಾಸ್ ಕೆ. ಉದ್ಘಾಟಿಸಿದರು.

ಕಾಲೇಜಿನ ಪ್ರಾಂಶುಪಾಲ ಜಾನ್ ಪಾಯ್ಸ್ ಅಧ್ಯಕ್ಷತೆ ವಹಿಸಿದ್ದರು.

ಲಿಗೋರಿಸ್ ಶಾಲೆಯ ಆಡಳಿತಾಧಿಕಾರಿ ಫಾ। ಗೋಡ್‌ಫ್ರೀ ಸಲ್ದಾನ ಆಶೀರ್ವಚನ ನೀಡಿದರು. ಜಿಪಂ ಸದಸ್ಯ ಮೆಲ್ವಿನ್ ಡಿ’ಸೋಜ, ನೀರುಮಾರ್ಗ ಸೇವಾ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಉದಯಕುಮಾರ್, ನಿವೃತ್ತ ಎಂಜಿನಿಯರ್ ಜೋಸೆಫ್ ಡಿ’ಸೋಜ, ಶಾಲಾ ಮುಖ್ಯೋಪಾಧ್ಯಾಯಿನಿ ಬೆನೆಡಿಕ್ಟಾ ಲೋಬೊ, ನಿವೃತ್ತ ಉಪ ಪ್ರಾಂಶುಪಾಲ ಹೆರಾಲ್ಡ್ ಮೊಂತೆರೊ, ಸಮಾಜಸೇವಕ ಐಬರ್ಟ್ ಸಲ್ದಾನ, ಜನಜಾಗೃತಿ ವೇದಿಕೆ ಸದಸ್ಯ ಸುಂದರ ಸುವರ್ಣ ಮತ್ತಿತರರು ಉಪಸ್ಥಿತರಿದ್ದರು.

ಕಾಲೇಜಿನ ಸಂಚಾಲಕ ಫಾ। ವಲೇರಿಯನ್ ಡಿ’ಸೋಜ ಸಮಾರೋಪದ ಅಧ್ಯಕ್ಷತೆ ವಹಿಸಿದ್ದರು.

ಫಾ। ಗೋಡ್‌ಫ್ರಿ ಸಲ್ದಾನ ಸಮಾರೋಪ ಭಾಷಣ ಮಾಡಿದರು. ಪಿಟಿಸಿ ಬಸ್ ಮಾಲಕ ಮಹಮ್ಮದ್ ಹಾಶೀಮ್, ಮಿಲಾಗ್ರಿಸ್ ಆಡಳಿತ ಮಂಡಳಿ ಉಪಾಧ್ಯಕ್ಷ ಐವನ್ ಡಿ’ಸೋಜ, ಪಂಚಾಯತ್ ಸದಸ್ಯೆ ಸೆಲಿನ್ ಸಲ್ದಾನ, ಲ್ಯಾನ್ಸಿ ಸಿಕ್ವೇರಾ, ಹಳೆ ವಿದ್ಯಾರ್ಥಿ ದೀಪಕ್ ಡಿ’ಸೋಜ ಮತ್ತಿತರರು ಶಿಬಿರದ ಬಗ್ಗೆ ಮಾತನಾಡಿದರು.

ಎನೆಸ್ಸೆಸ್ ಘಟಕದ ಕಾರ್ಯಕ್ರಮಾಧಿಕಾರಿ ಮೋಹನ್ ಕೃಷ್ಣ ನಂಬಿಯಾರ್ ಸ್ವಾಗತಿಸಿದರು.

ಜೆನಿಟ ವಂದಿಸಿದರು. ಉಪನ್ಯಾಸಕ ಐ. ಸಿ. ಕೋಟ್ಯಾನ್ ಅವರು ಕಾರ್ಯಕ್ರಮ ನಿರೂಪಿಸಿದರು.

ಯೋಗಗುರು ಶರತ್ ಅಮೀನ್ ಅವರ ಮಾರ್ಗದರ್ಶನದಲ್ಲಿ ಪ್ರತಿದಿನ ಯೋಗ ಮತ್ತು ಧ್ಯಾನ ಕಾರ್ಯಕ್ರಮ ನಡೆಯಿತು.

ಬಜಪೆ: ವಾಮಂಜೂರು ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಮಾರ್ಚ್ 8ರಂದು ಜರಗಲಿರುವ ಬ್ರಹ್ಮಕಲಶೋತ್ಸವದ ಪೂರ್ವಭಾವಿಯಾಗಿ ಶುಕ್ರವಾರ ಅನುಜ್ಞಾಕಲಶದ ಧಾರ್ಮಿಕ ಸಮಾರಂಭವು ಕ್ಷೇತ್ರದ ಪ್ರಧಾನ ತಂತ್ರಿ ಕುಡುಪು ನರಸಿಂಹ ತಂತ್ರಿ, ಕ್ಷೇತ್ರದ ಪ್ರಧಾನ ಅರ್ಚಕ ಟಿ.ಗೋಪಾಲಕೃಷ್ಣ ಭಟ್ ಅವರ ನೇತೃತ್ವದಲ್ಲಿ ಜರಗಿತು. ಈ ಸಂದರ್ಭದಲ್ಲಿ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಡಾ। ದಯಾಕರ ಪೂಂಜ, ಗೌರವಾಧ್ಯಕ್ಷರಾದ ಅಜಿತ್‌ಕುಮಾರ್ ರೈ ಮಾಲಾಡಿ, ಮೋಹನ ಅಮೀನ್, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸೀತಾರಾಮ ಜಾಣು ಶೆಟ್ಟಿ, ಕಾರ್ಯಾಧ್ಯಕ್ಷ ಬಿ.ಪುರುಷೋತ್ತಮ, ವ್ಯವಸ್ಥಾಪನ ಸಮಿತಿಯ ಅಧ್ಯಕ್ಷ ಬಿ.ಚಂದ್ರಹಾಸ ರೈ, ಕಾರ್ಪೊರೇಟರ್‌ಗಳಾದ ಭಾಸ್ಕರ ಮೊಯ್ಲಿ ಕುಡುಪು, ಹೇಮಲತಾ ರಘು ಸಾಲ್ಯಾನ್, ಮಂಜುನಾಥ ಭಂಡಾರಿ ಹಾಗೂ ಮಾಗಣೆಯ ಗ್ರಾಮಸ್ಥರು ಉಪಸ್ಥಿತರಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ

ಸಮಾಜ ಕಲ್ಯಾಣ ಸಚಿವರಿಗೆ ಮನವಿ

ಮಂಗಳೂರು, ನ. 1: ಮಂಗಳೂರು ಮಹಾನಗರ ಪಾಲಿಕೆಯಲ್ಲಿ ದುಡಿಯುತ್ತಿರುವ 117 ಮಂದಿ ದಿನಗೂಲಿ ಪೌರಕಾರ್ಮಿಕರನ್ನು ಖಾಯಂಗೊಳಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ತಾಲೂಕು ಶಾಖೆ ವತಿಯಿಂದ ಸಮಾಜ ಕಲ್ಯಾಣ ಸಚಿವ ಎಚ್. ಆಂಜನೇಯ ಅವರಿಗೆ ಮನವಿ ಸಲ್ಲಿಸಲಾಯಿತು.

ಪಾಲಿಕೆಯಲ್ಲಿ ಶೇ. 22.75ರ ನಿಧಿಯಿಂದ ವಿವಿಧ ಸವಲತ್ತುಗಳನ್ನು ತಡೆ ಹಿಡಿಯಲಾಗಿದ್ದು, ವಿದ್ಯಾರ್ಥಿವೇತನ, ಮನೆ ರಿಪೇರಿ, ತಾಳಿಭಾಗ್ಯ, ನಲ್ಲಿ ನೀರಿನ ವ್ಯವಸ್ಥೆ ಮುಂತಾದ ಸವಲತ್ತುಗಳು ಸಿಗದಿರುವುದರಿಂದ ದಲಿತರು ವಂಚಿತರಾಗಿದ್ದಾರೆ. ಸರಕಾರ ಇದನ್ನು ಗಂಭೀರವಾಗಿ ಪರಿಗಣಿಸಿ ತತ್‌ಕ್ಷಣ ವಿವಿಧ ಸವಲತ್ತುಗಳನ್ನು ನೀಡಲು ಮಂಜೂರಾತಿ ನೀಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ಪ.ಜಾತಿ ಮತ್ತು ಪ.ಪಂಗಡದ ಹಲವು ಕುಟುಂಬಗಳು ಖಾಸಗಿ ಭೂಮಾಲಕರ ಜಾಗದಲ್ಲಿ ಸ್ವಂತ ಮನೆಯಿಲ್ಲದೆ ವಾಸ ಮಾಡುತ್ತಿದ್ದು, ಹಕ್ಕುಪತ್ರ, ಆರ್‌ಟಿಸಿ ಮುಂತಾದ ದಾಖಲೆಗಳಿಲ್ಲ, ಸರಕಾರ ಭೂ ಮಾಲಕರ ಜಾಗವನ್ನು ಖರೀದಿಸಿ ಹಕ್ಕುಪತ್ರ ನೀಡಬೇಕು. ಪಾಲಿಕೆಯಲ್ಲಿ 64 ಮಂದಿ ಖಾಯಂ ಪೌರ ಕಾರ್ಮಿಕರು ಕಳೆದ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು, 2000ರಲ್ಲಿ ಅಂದಿನ ಮನಪಾ ಆಯುಕ್ತರಾಗಿದ್ದ ಜೆ. ಆರ್.ಲೋಬೊ ಅವರು ಖಾಯಂಗೊಳಿಸಿದ್ದರು. ಆದರೆ ಸರಕಾರದಿಂದ ಈ ವರೆಗೆ ಅನುಮೋದನೆ ನೀಡಿರುವುದಿಲ್ಲ, ಪ್ರಸ್ತುತ 64 ಮಂದಿ ಖಾಯಂ ಪೌರಕಾರ್ಮಿಕರಲ್ಲಿ 14 ಮಂದಿ ಮೃತಪಟ್ಟಿದ್ದು, ಈ ವರೆಗೆ ಅವಲಂಬಿತ ಕುಟುಂಬಕ್ಕೆ ಪಿಂಚಣಿ ಸೌಲಭ್ಯ ಮತ್ತು ಅನುಕಂಪದ ಆಧಾರದಲ್ಲಿ ಉದ್ಯೋಗ ದೊರೆತಿಲ್ಲ, ಸರಕಾರ ತತ್‌ಕ್ಷಣ ಖಾಯಂ ಪೌರಕಾರ್ಮಿಕರ ಖಾಯಮಾತಿಗೆ ಅನುಮೋದನೆ ನೀಡುವುದರೊಂದಿಗೆ ನಿಧನ ಹೊಂದಿದ ಕಾರ್ಮಿಕರ ಕುಟುಂಬಕ್ಕೆ ಅನುಕಂಪದ ನೆಲೆಯಲ್ಲಿ ಹುದ್ದೆ ನೀಡಬೇಕು ಎಂದು ತಿಳಿಸಲಾಯಿತು.

ಅಲ್ಲದೇ ಖಾಯಂ ಪೌರಕಾರ್ಮಿಕರು ಹಾಗೂ ವಿವಿಧ ಸರಕಾರಿ ಕಚೇರಿಗಳಲ್ಲಿ ದುಡಿಯುತ್ತಿರುವ ಪ.ಜಾತಿ/ಪ.ಪಂಗಡದವರಿಗೆ ವಾರ್ಷಿಕ ಆದಾಯ ಮಿತಿಯನ್ನು 3 ಲಕ್ಷ ರೂ.ಗಳಿಗೆ ಹೆಚ್ಚಿಸಬೇಕು ಎಂದು ಒತ್ತಾಯಿಸಲಾಯಿತು.

ನಿಯೋಗದಲ್ಲಿ ತಾಲೂಕು ಸಂಚಾಲಕ ಜಗದೀಶ್ ಪಾಂಡೇಶ್ವರ, ತಾಲೂಕು ಸಂಘಟನಾ ಸಂಚಾಲಕರಾದ ಕೆ. ಚಂದ್ರ, ರವಿ ಗಂಜಿಮಠ, ಸುರೇಶ್ ನಿಡ್ಡೋಡಿ, ಜಯಪ್ರಕಾಶ್ ಮಹಾಕಾಳಿಪಡ್ಪು ಉಪಸ್ಥಿತರಿದ್ದರು.

ಆರೋಗ್ಯಕ್ಕಾಗಿ ಪರಿಸರದ ಸ್ವಚ್ಛತೆ: ಕವಿತಾ

ಮಂಗಳೂರು, ನ. 1: ಆರೋಗ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಪರಿಸರದ ಸ್ವಚ್ಛತೆ ಅಗತ್ಯವಾಗಿದೆ. ಎಲ್ಲರೂ ತಮ್ಮ ಪರಿಸರದ ಬಗ್ಗೆ ವಿಶೇಷ ಕಾಳಜಿ ವಹಿಸಿ ಮಂಗಳೂರನ್ನು ಸ್ವಚ್ಛ ನಗರವನ್ನಾಗಿಸಲು ಪ್ರಯತ್ನಿಸಬೇಕು ಎಂದು ಉಪ ಮೇಯರ್ ಕವಿತಾ ವಾಸು ಹೇಳಿದರು.

ಮಂಗಳೂರು ಮಹಾನಗರ ಪಾಲಿಕೆಯ ಸಹಭಾಗಿತ್ವದಲ್ಲಿ ಬೋಳೂರು ಯುನೈಟೆಡ್ ಸ್ಪೋರ್ಟ್ಸ್ ಕ್ಲಬ್‌ನ ನೇತೃತ್ವದಲ್ಲಿ ಬೋಳೂರು ಪರಿಸರದಲ್ಲಿ ನಡೆದ ಸ್ವಚ್ಛತಾ ಅಭಿಯಾನವನ್ನು ಅವರು ಉದ್ಘಾಟಿಸಿದರು.

ಮನಪಾ ಆರೋಗ್ಯಾಧಿಕಾರಿ ಡಾ। ಎಂ. ವಿ. ಶೆಟ್ಟಿ, ಮಾಜಿ ಕಾರ್ಪೊರೇಟರ್ ಬಿ. ಕಮಲಾಕ್ಷ ಸಾಲ್ಯಾನ್, ಕ್ಲಬ್‌ನ ಗೌರವಾಧ್ಯಕ್ಷ ವಾಸುದೇವ ಬೋಳೂರು, ಅಧ್ಯಕ್ಷ ಆರ್. ಪಿ. ಬೋಳೂರು ಮತ್ತಿತರರು ಉಪಸ್ಥಿತರಿದ್ದರು.

ಮೊಗವೀರ ಮಹಿಳಾ ಮಂಡಲ, ಶ್ರೀ ಬಾಲಾಂಜನೇಯ ವ್ಯಾಯಾಮ ಮಂದಿರ, ಶ್ರೀ ಬಾಲಾಂಜನೇಯ ವ್ಯಾಯಾಮ ಶಾಲೆ, ಶ್ರೀ ಮಹಾವಿಷ್ಣು ಶೇಷಶಯನ ಭಜನ ಮಂದಿರ, ಶ್ರೀ ವಿಷ್ಣು ವಿಠೋಭ ಭಜನಾ ಮಂದಿರ, ಬತ್ತೇರಿ ಫ್ರೆಂಡ್ಸ್, ಕಂಪ್ಯೂಟರ್ ಫ್ರೆಂಡ್ಸ್ ಮುಂತಾದವರ ಸಹಕಾರದೊಂದಿಗೆ ಸ್ವಚ್ಛತಾ ಕಾರ್ಯಕ್ರಮ ನಡೆಯಿತು.

ನ.2: ದರ್ಶನ ಸೇವೆ

ಮಂಗಳೂರು, ನ. 1: ಹೊಸಬೆಟ್ಟು ಶ್ರೀ ಕ್ಷೇತ್ರ ಕೋಡ್ದಬ್ಬು ‘ಕಲ’ ಇಲ್ಲಿ ನ.2ರಂದು ಶ್ರೀ ದೇವರ ದರ್ಶನ ಸೇವೆ ನಡೆಯಲಿದೆ. ಬೆಳಗ್ಗೆ 7ಕ್ಕೆ ಗಣಹೋಮ, ನವಕಲಶಾಭಿಷೇಕ ನಡೆದು ದರ್ಶನ ಸೇವೆ ಜರಗಲಿದೆಎಂದು ಕ್ಷೇತ್ರದ ಪ್ರಕಟನೆ ತಿಳಿಸಿದೆ.

ಮುನ್ನೂರು: ಸಿಪಿಎಂ ಪಕ್ಷದ 1ನೇ ಶಾಖಾ ಸಮ್ಮೇಳನ

ಉಳ್ಳಾಲ, ನ. 1: ಮುನ್ನೂರು ಕುತ್ತಾರು ಪದವು ಸಿಪಿಎಂ ಪಕ್ಷದ ಒಂದನೇ ಶಾಖಾ ಸಮ್ಮೇಳನವು ಕೇಶವ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಮಿತಿ ಕಾರ್ಯದರ್ಶಿ ಕೃಷ್ಣಪ್ಪ ಸಾಲಿಯಾನ್ ಸಮ್ಮೇಳನಕ್ಕೆ ಚಾಲನೆ ನೀಡಿದರು.

ವರದಿ ವಿಚಾರದಲ್ಲಿ ಚರ್ಚೆ ನಡೆದು ಜನಸಾಮಾನ್ಯರ ಸಮಸ್ಯೆಗಳಾದ ಕುಡಿಯುವ ನೀರಿನ ಸಮಸ್ಯೆ, ಮನೆ ನಿವೇಶನ ರಹಿತರ ಹೋರಾಟ, ಸರಕಾರಿ ಜಾಗದಲ್ಲಿ ಮನೆ ನಿವೇಶನ ರಹಿತರ ಹೋರಾಟ, ಸರಕಾರಿ ಜಾಗದಲ್ಲಿ ಮನೆ ಕಟ್ಟಿ ವಾಸ ಮಾಡುವವರಿಗೆ ಹಕ್ಕುಪತ್ರ, ಮನೆ ನಂಬ್ರ ನೀಡಬೇಕು. ಸಾಮೂಹಿಕ ಸಂಘಟನೆಗಳಾದ ಬೀಡಿ ಕಾರ್ಮಿಕರ ಹೋರಾಟ, ಕಟ್ಟಡ ಕಾರ್ಮಿಕರ ಹೋರಾಟ ಹಾಗೂ ಇತರ ಕಾರ್ಮಿಕರ ಹೋರಾಟದಿಂದ ಕಾರ್ಮಿಕರು ಜನಸಾಮಾನ್ಯರಿಗೆ ಪ್ರಯೋಜನವಾಗಿದೆ. ಈ ಸಂದರ್ಭದಲ್ಲಿ ಸಂತೋಷ್ ನಗರದ ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಎದುರಿಗೆ ಕಾಂಕ್ರಿಟೀಕರಣ, ಚರಂಡಿ ವ್ಯವಸ್ಥೆ ಮಾಡಬೇಕು. ಕುತ್ತಾರು ಪದವಿನಲ್ಲಿ ಮೀನು, ತರಕಾರಿ, ವಾಣಿಜ್ಯ ಮಾರ್ಕೆಟ್ ಸಂಕೀರ್ಣ ಮಾಡಬೇಕು. ಕುತ್ತಾರು ಜಂಕ್ಷನ್‌ನಲ್ಲಿ ಬಸ್ಸು ತಂಗುದಾಣ ಮಾಡಬೇಕು. ಮುನ್ನೂರು ಯುವಕ ಮಂಡಲ ರಸ್ತೆ ಕಾಂಕ್ರೀಟ್ ಮಾಡಬೇಕು. ಎಲ್ಲ ನಿವೇಶನ ರಹಿತರಿಗೆ ನಿವೇಶನ ನೀಡಬೇಕು. ಎಲ್ಲಾ ಕೆಟ್ಟು ಹೋಗಿರುವ ರಸ್ತೆಗಳನ್ನು ಡಾಮರೀಕರಣ ಮಾಡಬೇಕು. ಎಂದು ಈ ಸಂದರ್ಭದಲ್ಲಿ ಬೇಡಿಕೆಗಳನ್ನಿಡಲಾಯಿತು.ಈ ಸಂದರ್ಭದಲ್ಲಿ ಠರಾವು ಮಂಜೂರು ಮಾಡಲಾಯಿತು.

ಸಮ್ಮೇಳನದಲ್ಲಿ ನೂತನ ಕಾರ್ಯದರ್ಶಿಯಾಗಿ ಜಯರಾಮ ಕೆ. ಅವರನ್ನು ಆಯ್ಕೆ ಮಾಡಲಾಯಿತು. ಶಾಖಾ ಕಾರ್ಯದರ್ಶಿ ಜನಾರ್ದನ ಕೆ. ವರದಿ ಮಂಡಿಸಿದರು. ವಲಯ ಸಮಿತಿ ಸದಸ್ಯ ವಿಶ್ವನಾಥ್ ಕೆ., ಮಹಾಬಲ ಬಟ್ಟೆದಡಿ ಉಪಸ್ಥಿತರಿದ್ದರು.

ವಿವಿಧೆಡೆ ಸ್ವಚ್ಛತಾ ಆಂದೋಲನ

ಉರ್ವ ಚರ್ಚ್

ಮಂಗಳೂರು, ನ. 1: ನಮ್ಮ ಮನೆಯನ್ನು ಸ್ವಚ್ಛವಾಗಿಡುವಂತೆ ದೇಶವನ್ನು ಕೂಡಾ ಸ್ವಚ್ಛವಾಗಿಡುವುದು ನಮ್ಮ ಜವಾಬ್ದಾರಿ ಎಂದು ಚಿಲಿಂಬಿಯ ಶಿರಡಿ ಸಾಯಿಬಾಬಾ ಮಂದಿರದ ಆಡಳಿತ ಮೊಕ್ತೇಸರ ವಿಶ್ವಾಸಕುಮಾರ್ ದಾಸ್ ಹೇಳಿದರು.

ಉರ್ವ ಚರ್ಚ್‌ನ ಆಶ್ರಯದಲ್ಲಿ ಚರ್ಚ್‌ನ ಶಿಕ್ಷಣ ಸಂಸ್ಥೆಗಳು ಹಾಗೂ ವಿವಿಧ ಸಂಘ ಸಂಸ್ಥೆಗಳ ವತಿಯಿಂದ ಶನಿವಾರ ನಡೆದ ಸ್ವಚ್ಛತಾ ಆಂದೋಲನಕ್ಕೆ ಅವರು ಚಾಲನೆ ನೀಡಿದರು.

ಉರ್ವ ಚರ್ಚ್‌ನ ಧರ್ಮಗುರು ಫಾ। ವಿಕ್ಟರ್ ಡಿಮೆಲ್ಲೊ ಪ್ರತಿಜ್ಞಾ ವಿಧಿ ಬೋಧಿಸಿದರು. ಕಾರ್ಪೊರೇಟರ್‌ಗಳಾದ ರಾಧಾಕೃಷ್ಣ, ಜಯಂತಿ ಆಚಾರ್, ರಜನೀಶ್, ದ.ಕ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪಿ.ಬಿ.ಹರೀಶ್ ರೈ ಮುಖ್ಯ ಅತಿಥಿಗಳಾಗಿದ್ದರು.

ಚರ್ಚ್‌ನ ಸಹಾಯಕ ಧರ್ಮಗುರು ಫಾ। ಜೀವನ್ ಸಿಕ್ವೇರಾ, ಪಾಲನಾ ಸಮಿತಿ ಉಪಾಧ್ಯಕ್ಷ ಹಿಲರಿ ಡಿ’ಸೋಜಾ, ಕಾರ್ಯದರ್ಶಿ ಜೆನ್ನಿ ಮಥಾಯಿಸ್, ಕೆವಿನ್ ಮಾರ್ಟಿಸ್, ಉರ್ವ ಚರ್ಚ್‌ನ ಶಿಕ್ಷಣ ಸಂಸ್ಥೆಗಳ ಮುಖ್ಯ ಗುರುಗಳಾದ ಪ್ರೆಸಿಲ್ಲಾ ಡಿ’ಸೋಜಾ, ಫ್ಲೋರಿನ್ ಪಿರೇರಾ ಉಪಸ್ಥಿತರಿದ್ದರು. ಹಿಲರಿ ಫ್ರಾಂಕ್ ಡಿ’ಸೋಜಾ ಕಾರ್ಯಕ್ರಮ ನಿರೂಪಿಸಿದರು.

ಉರ್ವ ಸೈಂಟ್ ಅಲೋಶಿಯಸ್ ಆಂಗ್ಲ ಮಾಧ್ಯಮ ಶಾಲೆ, ಪಾಂಪೈ ಪ್ರೌಢಶಾಲೆ, ಸೈಂಟ್ ಅಲೋಶಿಯಸ್ ಕನ್ನಡ ಮಾಧ್ಯಮ ಶಾಲೆ, ಲೇಡಿಹಿಲ್ ಶಾಲೆಯ 500ಕ್ಕೂ ಅಧಿಕ ವಿದ್ಯಾರ್ಥಿಗಳು ಆಂದೋಲನದಲ್ಲಿ ಭಾಗವಹಿಸಿದ್ದರು.

ಕಿರೆಂ ಚರ್ಚ್

ಕಿನ್ನಿಗೋಳಿ, ನ. 1: ದಾಮಸ್‌ಕಟ್ಟೆ ರೆಮೆದಿ ಅಮ್ಮನವರ ಚರ್ಚ್ ಕಿರೆಂ, ಭಾರತೀಯ ಕೆಥೋಲಿಕ್ ಯುವ ಸಂಚಾಲನ ಕಿರೆಂ ಘಟಕ, ತರುಣ ಕಲಾ ವೃಂದ ದಾಮಸ್‌ಕಟ್ಟೆ, ಶ್ರೀ ದುರ್ಗಾಪರಮೇಶ್ವರೀ ಯಕ್ಷಗಾನ ಬಯಲಾಟ ಸಮಿತಿ ದಾಮಸ್‌ಕಟ್ಟೆ, ಕಿನ್ನಿಗೋಳಿ ಗ್ರಾಮ ಪಂಚಾಯತ್ ಹಾಗೂ ಇತರ ಸಂಘ ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ಕಿರೆಂ ಚರ್ಚ್ ಬಳಿ ನ. 1ರಂದು ಸ್ವಚ್ಛತಾ ಆಂದೋಲನ ಕಾರ್ಯಕ್ರಮ ನಡೆಯಿತು.

ಕಿರೆಂ ಚರ್ಚ್‌ನ ಧರ್ಮಗುರು ಫಾ। ಪೌಲ್ ಪಿಂಟೋ, ಕಿನ್ನಿಗೋಳಿ ಗ್ರಾ. ಪಂ. ಅಧ್ಯಕ್ಷೆ ಶ್ಯಾಮಲಾ ಪಿ. ಹೆಗ್ಡೆ, ಭಾರತೀಯ ಕೆಥೋಲಿಕ್ ಯುವ ಸಂಚಾಲನ ಕಿರೆಂ ಘಟಕದ ಮನೋಜ್, ದಾಮಸ್‌ಕಟ್ಟೆ ಶ್ರೀ ದುರ್ಗಾಪರಮೇಶ್ವರೀ ಯಕ್ಷಗಾನ ಬಯಲಾಟ ಸಮಿತಿ ಅಧ್ಯಕ್ಷ ನಾರಾಯಣ ಅಂಚನ್, ತರುಣ ಕಲಾ ವೃಂದದ ಅಧ್ಯಕ್ಷ ರಂಜಿತ್ ಅಂಚನ್, ಸಂತಾನ್ ಡಿ’ಸೋಜ, ಸುಜಾತಾ ಪೂಜಾರ್ತಿ, ವೆಂಕಪ್ಪ ಕೋಟ್ಯಾನ್, ದಿವಾಕರ ಕರ್ಕೇರ, ಪ್ರಕಾಶ್ ಹೆಗ್ಡೆ ಎಳತ್ತೂರು, ಪ್ರಕಾಶ್ ಆಚಾರ್ ಉಪಸ್ಥಿತರಿದ್ದರು.

ಸಂತ ಸೆಬೆಸ್ತಿಯನ್ ಧರ್ಮಕೇಂದ್ರ

ಉಳ್ಳಾಲ, ನ. 1: ಸ್ವಚ್ಛತೆಯಿಂದಲೇ ಆರೋಗ್ಯ, ಬಂಡವಾಳ, ದೇಶದ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ಸ್ವಚ್ಛ ಮನಸ್ಸಿನಿಂದ ಜನರು ಅಭಿಯಾನದಲ್ಲಿ ಕೈಜೋಡಿಸಬೇಕಿದೆ ಎಂದು ಖ್ಯಾತ ಪರಿಸರವಾದಿ ಮಾಧವ ಉಳ್ಳಾಲ್ ಅಭಿಪ್ರಾಯಪಟ್ಟರು.

ಸಂತ ಸೆಬೆಸ್ತಿಯನ್ ಧರ್ಮಕೇಂದ್ರದ ವತಿಯಿಂದ ತೊಕ್ಕೊಟ್ಟು ಬಸ್ ನಿಲ್ದಾಣದಲ್ಲಿ ಶನಿವಾರ ನಡೆದ ಸ್ವಚ್ಛತಾ ಅಭಿಯಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಪೆರ್ಮನ್ನೂರು ಚರ್ಚಿನ ಧರ್ಮಗುರು ಫಾ। ಜೆ.ಬಿ. ಸಲ್ದಾನ್ಹ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉಳ್ಳಾಲ ಪುರಸಭೆಯ ಮುಖ್ಯಾಧಿಕಾರಿ ರೂಪಾ ಟಿ. ಶೆಟ್ಟಿ ಪೆರ್ಮನ್ನೂರು ಚರ್ಚಿನ ಸಹಾಯಕ ಫಾ। ರೋಹನ್ ಲೋಬೋ, ಫಾ। ರೂಪೇಶ್ ಮಾಡ್ತ, ಸಂತ ಸೆಬೆಸ್ಟಿಯನ್ ಕಾಲೇಜು ಪೆರ್ಮನ್ನೂರು ಇದರ ಪ್ರಾಂಶುಪಾಲ ಫಾ। ಎಡ್ವಿನ್ ಮಸ್ಕರೇನಸ್ ಪೆರ್ಮನ್ನೂರು, ಚರ್ಚ್ ಪಾಲನಾ ಸಮಿತಿ ಉಪಾಧ್ಯಕ್ಷರಾದ ಲೂಕಸ್ ಡಿ’ಸೋಜ, ಕಾರ್ಯದರ್ಶಿ ಡೆಮಿಟ್ರಿಯಸ್ ಡಿ’ಸೋಜಾ ಉಪಸ್ಥಿತರಿದ್ದರು. ರವಿರಾಜ್ ಡಿ’ಸೋಜಾ ಕಾರ್ಯಕ್ರಮ ನಿರೂಪಿಸಿದರು. ಜೊಸ್ಲಿನ್ ಡಿ’ಸೋಜಾ ವಂದಿಸಿದರು. ಇದೇ ಸಂದರ್ಭ ಸಂತ ಸೆಬೆಸ್ಟಿಯನ್ನರ ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳಿಂದ ಪರಿಸರ ಕಾಳಜಿ ಕುರಿತ ಬೀದಿ ನಾಟಕ ಪ್ರದರ್ಶಿಸಿದರು.

ಗಾರ್ಡಿಯನ್ ಏಂಜಲ್, ಧರ್ಮ ಕೇಂದ್ರ ...ಲೋರ್, ನಾಗೋರಿ
ಇದರ ವತಿ
"ಸ್ವಚ್ಛತಾ ಆಂದೋ
ಮುಖ್ಯ ಅತಿಥಿ: ಶ್ರೀ

ಮಂಗಳೂರು: ಆಂಜೆಲೋರ್ ಗಾರ್ಡಿಯನ್ ಏಂಜಲ್ ಚರ್ಚ್ ವತಿಯಿಂದ ನ. 1ರಂದು ನಡೆದ ಸ್ವಚ್ಛತಾ ಅಭಿಯಾನವನ್ನು ಗರೋಡಿ ಬಸ್ಸು ತಂಗುದಾಣದ ಬಳಿ ವಿಧಾನ ಪರಿಷತ್ ಸದಸ್ಯ ಐವನ್ ಡಿ’ಸೋಜಾ ಅವರು ಉದ್ಘಾಟಿಸಿದರು. ಚರ್ಚ್‌ನ ಧರ್ಮಗುರು ಫಾ। ಮ್ಯಾಥ್ಯೂ ವಾಸ್, ಕಾರ್ಪೊರೇಟರ್‌ಗಳಾದ ಕೇಶವ ಮರೋಳಿ, ಆಶಾ ಡಿ’ಸಿಲ್ವಾ, ಪ್ರವೀಣ್ ಚಂದ್ರ ಆಳ್ವ, ಫೋರ್‌ವಿಂಡ್ಸ್ ಜಾಹೀರಾತು ಸಂಸ್ಥೆಯ ನಿರ್ದೇಶಕ ಇ. ಫೆರ್ನಾಂಡಿಸ್ ಉಪಸ್ಥಿತರಿದ್ದರು. ಅಭಿಯಾನದ ಅಂಗವಾಗಿ ಸುಮಾರು 1 ಕಿ.ಮೀ.ನಷ್ಟು ರಸ್ತೆಯ ಬದಿಯನ್ನು ಸ್ವಚ್ಛಗೊಳಿಸಲಾಯಿತು.

‘ಯುವಕರ ಕೊಡುಗೆಯಿಂದ ದೇಶ ಬಲಾಢ್ಯ’

SDM COLLEGE OF BUSINESS MANAGEMENT POST GRADUATE CENTRE FOR MANAGEMENT STUDIES AND RESEARCH, MANGALORE
PATRIOTISM FORUM

ಮಂಗಳೂರು, ನ. 1: ಯುವಶಕ್ತಿ ಭವಿಷ್ಯ ಭಾರತದ ಕುರಿತು ಹೆಚ್ಚಿನ ಆಸಕ್ತಿ ತಳೆಯಬೇಕು. ದೇಶದ ಅಭಿವೃದ್ಧಿಯಲ್ಲಿ ಯುವ ಸಮುದಾಯ ಮಹತ್ತರ ಕೊಡುಗೆ ನೀಡಿದರೆ ದೇಶ ಬಲಾಢ್ಯವಾಗಲು ಸಾಧ್ಯ ಎಂದು ಮಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಶನ್ ಅಧ್ಯಕ್ಷ ಎಂ. ಆರ್. ವಾಸುದೇವ ರಾವ್ ಹೇಳಿದರು.

ಎಸ್‌ಡಿಎಂ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಪಿಜಿ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಆ್ಯಂಡ್ ರಿಸರ್ಚ್‌ನ ಪ್ಯಾಟ್ರಿಯೋಟಿಸಂ ಫೋರಂ ವತಿಯಿಂದ ನಡೆದ ನಿರ್ವಹಣೆ ಮತ್ತು ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರು ಎಂಬ ವಿಷಯದ ಕುರಿತು ಅವರು ಉಪನ್ಯಾಸ ನೀಡಿದರು.

ದಿಕ್ಸೂಚಿ ಭಾಷಣ ಮಾಡಿದ ರಾಷ್ಟ್ರ ಗೌರವ ಸಂರಕ್ಷಣ ಪರಿಷತ್‌ನ ಅಧ್ಯಕ್ಷ ಟಿ. ಎನ್. ರಾಮಕೃಷ್ಣ ಮಾತನಾಡಿ, ದೇಶದ ಶಿಕ್ಷಣ, ಕೈಗಾರಿಕಾ ಕ್ಷೇತ್ರ ಸೇರಿದಂತೆ ವಿವಿಧ ರಂಗಗಳಲ್ಲಿ ಸುಸ್ಥಿರ ಅಭಿವೃದ್ಧಿಯಾಗಬೇಕು. ಈ ನಿಟ್ಟಿನಲ್ಲಿ ವಿವಿಧ ಸಂಸ್ಥೆಗಳು ತಮ್ಮದೇ ಆದ ಕೊಡುಗೆ ನೀಡಬೇಕು. ಆ ಮೂಲಕ ದೇಶ ಕಲ್ಯಾಣಪಥದತ್ತ ಸಾಗುತ್ತದೆ ಎಂದರು. ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಡಾ। ದೇವರಾಜ್ ಕೆ., ಬೋಧಕ ಸಂಚಾಲಕಿ ಡಾ। ಹರ್ಷಿತಾ, ವಿದ್ಯಾರ್ಥಿ ಸಂಚಾಲಕ ನರೇಂದ್ರ ಪ್ರಭು ಉಪಸ್ಥಿತರಿದ್ದರು.

ಸೌಮ್ಯಶ್ರೀ ಪರಿಚಯ ಮಾಡಿದರು. ಪಾರ್ವತಿ ಸ್ವಾಗತಿಸಿದರು. ಧೀರಜ್ ಶೇಟ್ ವಂದಿಸಿದರು. ಕರೀಶ್ಮಾ ಕಾರ್ಯಕ್ರಮ ನಿರೂಪಿಸಿದರು.

ಬಜಪೆ: ಸಂಸದರ ನಿಧಿಯಿಂದ 5 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ಗುರುಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಡ್ಡೂರು ಗ್ರಾಮದ ನೂಯಿ –ಇಂದಿರಾನಗರ ಕಾಂಕ್ರೀಟೀಕರಣ ರಸ್ತೆಯನ್ನು ಸಂಸದ ನಳಿನ್ ಕುಮಾರ್ ಕಟೀಲು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ರಸ್ತೆಗೆ ಜಾಗ ನೀಡಿದ ರವಿಶಂಕರ್ ರಾವ್ ನೂಯಿ, ಸುರೇಶ್ ರಾವ್ ನೂಯಿ ಅವರನ್ನು ಸಮ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಲಕ್ಷ್ಮಣ, ರಾಜೇಶ್, ನಳಿನಿ, ಹೇಮಾವತಿ, ಶೈಲಜಾ, ರುಕ್ಮಯ ಉಳಿಯ, ಕೃಷ್ಣ ಪೊಣ್ಣೆಲ, ಭೋಜ ಪೊಣ್ಣೆಲ, ಆನಂದ ಅಡ್ಡೂರು, ಸುಬ್ಬಯ್ಯ ಭಂಡಾರಿ, ಸಂತೋಷ್, ಶಿವಪ್ರಸಾದ್ ಮುಂತಾದವರು ಉಪಸ್ಥಿತರಿದ್ದರು. ಈ ರಸ್ತೆಗೆ ನೂಯಿ ಪರಮೇಶ್ವರ ರಾವ್ ರಸ್ತೆ ಎಂದು ನಾಮಕರಣ ಮಾಡಲಾಯಿತು.

VIJAYA BANK

ಕಟೀಲು: ಕಟೀಲು ವಿಜಯ ಬ್ಯಾಂಕ್‌ನಲ್ಲಿ ಸಂಸ್ಥಾಪಕರ ದಿನಾಚರಣೆ ನಡೆಯಿತು. ಕಟೀಲು ದೇಗುಲದ ಪಾಂಡುರಂಗ ಭಟ್ ಉದ್ಘಾಟಿಸಿದರು. ಪದವಿ ಕಾಲೇಜಿನ ಪ್ರಾಚಾರ್ಯ ಎಂ.ಬಾಲಕೃಷ್ಣ ಶೆಟ್ಟಿ, ಜಯರಾಮ ಶೆಟ್ಟಿ, ಡಾ। ಶಶಿಕುಮಾರ್, ರಘುಪತಿ ಭಟ್, ಶಾಖಾ ಪ್ರಬಂಧಕಿ ವಿನುತಾ ಪಿ.ವಿ., ವಿಜಯ ಶೆಟ್ಟಿ, ವಾಸು, ಆನಂದ್, ಅಜಿತ್ ಪಿ., ಸಂಜೀವ ಮುಂತಾದವರಿದ್ದರು.

ಸುರತ್ಕಲ್: ಬ್ರಹ್ಮಶ್ರೀ ನಾರಾಯಣ ಗುರು ಸೇವಾ ಸಂಘ (ರಿ.) ಅಗ್ಗಿದಕಳಿಯ ಸಸಿಹಿತ್ಲು ಇಲ್ಲಿ ನಿರ್ಮಾಣವಾಗುತ್ತಿರುವ ಸಮುದಾಯ ಭವನಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ವತಿಯಿಂದ ನೀಡಲ್ಪಟ್ಟ ಒಂದು ಲಕ್ಷ ರೂ.ಸಹಾಯಧನದ ಚೆಕ್ಕನ್ನು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಮಂಗಳೂರು ತಾಲೂಕು ಯೋಜನಾಧಿಕಾರಿ ರಾಘವ ಇವರು ಕಟ್ಟಡ ಸಮಿತಿ ಅಧ್ಯಕ್ಷ ಉದಯ ಸುವರ್ಣ ಇವರಿಗೆ ಹಸ್ತಾಂತರಿಸಿದರು. ಮೂಲ್ಕಿ ವಲಯದ ಮೇಲ್ವಿಚಾರಕಿ ರೇಖಾ ಶೆಟ್ಟಿ, ಸಸಿಹಿತ್ಲು ಒಕ್ಕೂಟದ ಅಧ್ಯಕ್ಷರಾದ ಶೈಲಜಾ ಪಿ. ಬಂಗೇರ, ಉಪಾಧ್ಯಕ್ಷರಾದ ರವೀಂದ್ರ ಕೋಟ್ಯಾನ್, ಸಂಘದ ಕಾರ್ಯದರ್ಶಿ ಕಿರಣ್ ಕುಮಾರ್ ಉಪಸ್ಥಿತರಿದ್ದರು.

ವಾಮಂಜೂರು: ಶಿಷ್ಯವೇತನ ವಿತರಣೆ

LIC L.I.C ... MANGALORE
PENSION ... UP SCHEMES UNIT
DHARMA ... VAMANJOOR - 533459
PROGRAMME
YOJANA

ಬಜಪೆ, ನ. 1: ಜೀವ ವಿಮಾ ನಿಗಮ ಆಮ್ ಆದ್ಮಿ ಯೋಜನೆಯ ಸದಸ್ಯರ ಮಕ್ಕಳಿಗೆ ಶಿಕ್ಷಣ ಸಹಯೋಜನೆಯ ಅಂಗವಾಗಿ ವಾಮಂಜೂರಿನ ಧರ್ಮಜ್ಯೋತಿ ಸಮಾಜ ಸೇವಾ ಸಂಸ್ಥೆಯಲ್ಲಿ ಶಿಷ್ಯವೇತನ ವಿತರಣೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸೇವಾ ಸಂಸ್ಥೆಯ ನಿರ್ದೇಶಕಿ ಡ್ಯಾಫ್ನಿ ಡಿ’ಸೋಜ ಅವರು ವಹಿಸಿದ್ದರು.

ಜೀವ ವಿಮಾ ನಿಗಮದ ವಿಭಾಗೀಯ ಅಧಿಕಾರಿ ಶಂಕರ ವಿ.ಹೆಗಡೆ ಮಾತನಾಡುತ್ತಾ ಆರ್ಥಿಕವಾಗಿ ದುರ್ಬಲರಿಗೆ ಸಮಾಜಿಕ ಭದ್ರತೆಗಾಗಿ ಅನುಕೂಲವಾಗಲು ಹಾಗೂ ಅವರ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದು ಈ ಯೋಜನೆಯ ಉದ್ದೇಶವಾಗಿದೆ ಎಂದರು.

ವೇದಿಕೆಯಲ್ಲಿ ಜೀವ ವಿಮಾ ನಿಗಮದ ವಸಂತ ಕುಮಾರ್, ಸಹನಿರ್ದೇಶಕಿ ಭಗಿನಿ ಶೆರ್ಲಿ ಉಪಸ್ಥಿತರಿದ್ದರು. ಸಂಸ್ಥೆಯ ಕಾರ್ಯಸಂಯೋಜಕ ಟಿ.ನಾಗೇಂದ್ರ ರಾವ್ ಸ್ವಾಗತಿಸಿದರು. ಲತಾ ಕಾರ್ಯಕ್ರಮ ನಿರೂಪಿಸಿದರು. ಲಿಲ್ಲಿ ಮೇರಿ ವಂದಿಸಿದರು.

ಮೂಲ್ಕಿ: ಮೂಲ್ಕಿಯ ಮೆಡಲಿನ್ ಪ್ರೌಢಶಾಲೆಯಲ್ಲಿ ಕಳೆದ ನಾಲ್ಕು ದಶಕಗಳ ಕಾಲ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಮೋನಿಕಾ ಟೀಚರ್ ಅವರಿಗೆ ಬೀಳ್ಕೊಡುಗೆ ಸಮಾರಂಭ ಬೆಥನಿ ಶಿಕ್ಷಣ ಸಂಸ್ಥೆಗಳ ಸಂಯೋಜಕಿ ಸಿ। ಕ್ರಿಸ್ಟೆಲ್ಲಾ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮಾರಂಭದಲ್ಲಿ ನ.ಪಂ. ಉಪಾಧ್ಯಕ್ಷೆ ವಸಂತಿ ಭಂಡಾರಿ, ಶಾಲೆಯ ಸಂಚಾಲಕಿ ಸಿ। ಆಗ್ನೇಸ್ ಪಿಂಟೋ, ಶಿಕ್ಷಕ –ರಕ್ಷಕ ಸಂಘದ ಉಪಾಧ್ಯಕ್ಷ ರೊನಾಲ್ಡ್ ಕರ್ಕಡ, ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷ ನಾಗರಾಜ ಆಚಾರ್ಯ, ವ್ಯಾಸಮಹರ್ಷಿ ವಿದ್ಯಾಪೀಠ ಶಾಲೆಯ ಮುಖ್ಯೋಪಾಧ್ಯಾಯಿನಿ ಚಂದ್ರಿಕಾ ಭಂಡಾರಿ, ರೋಜ್ಲಿನ್ ಮೋನಿಸ್, ಪೌಸ್ಟಿನ್ ಡಿ’ಸೋಜ, ಕೋನಿ ವಾಜ್, ಹಿಲ್ಡಾ ಟೀಚರ್ ಕೋನಿ ವಾಸ್ ಮಗ್ದಲಿನ್ ಡಿ’ಸೋಜ ಮುಂತಾದವರು ಉಪಸ್ಥಿತರಿದ್ದರು.

ನ.2: ಉದ್ಘಾಟನೆ, ಶಂಕುಸ್ಥಾಪನೆ

ಮೂಡಬಿದಿರೆ, ನ. 1: ಶ್ರೀ ಮಹಾವೀರ ಕಾಲೇಜಿನ ಸ್ವರ್ಣ ಮಹೋತ್ಸವ ಸೌಧ –1ನ್ನು ರವಿವಾರ ಬೆ.ಗಂ. 9ಕ್ಕೆ ರಾಜ್ಯಸಭಾ ಸದಸ್ಯ ಆಸ್ಕರ್ ಫೆರ್ನಾಂಡಿಸ್ ಉದ್ಘಾಟಿಸಲಿರುವರು.

ಇದೇ ವೇಳೆ, ಕಾಲೇಜಿನ ಸ್ವರ್ಣ ಮಹೋತ್ಸವ ಸೌಧದ ಎರಡನೇ ವಿಭಾಗದ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆಯನ್ನು ಕಾಲೇಜಿನ ಹಳೆ ವಿದ್ಯಾರ್ಥಿ, ಮುಂಬಯಿಯ ಆರ್ಗಾನಿಕ್ ಇಂಡಸ್ಟ್ರೀಸ್‌ನ ಆಡಳಿತ ನಿರ್ದೇಶಕ ಆನಂದ ಶೆಟ್ಟಿ ಇವರು ನೆರವೇರಿಸಲಿರುವರು.

ಸಚಿವ, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಕೆ. ಅಭಯ ಚಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆಯ ಲಿರುವ ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಣಿಪಾಲದ ಅಕಾಡೆಮಿ ಆಫ್ ಜನರಲ್ ಎಜುಕೇಶನ್‌ನ ಆಡಳಿತಾಧಿಕಾರಿ ಡಾ। ಎಚ್. ಶಾಂತಾರಾಮ್ ಭಾಗವಹಿಸಲಿದ್ದಾರೆ .

ಚಿತ್ರ ರಂಜನೆ

ಜ್ಯೋತಿ	ಚಾಲಿ ಪೋಲಿಲು 4 ದೇಖಾವೆಗಳು (ತುಳು) 10.00, 1.00, 4.00, 7.00
ನ್ಯೂಚಿತ್ರಾ	ROAR 4 ದೇಖಾವೆಗಳು (Hindi) 10.00 am, 1.00 pm, 4.00 pm, 7.00 pm
ರೂಪವಾಣಿ	ಬಹದ್ದೂರ್ 4 ದೇಖಾವೆಗಳು (ಕನ್ನಡ) 9.45, 12.45, 3.45, 6.45
ಅಮರಶ್ರೀ ಮೂಡಬಿದ್ರಿ	ಚಾಲಿ ಪೋಲಿಲು (ತುಳು) 1.15 pm, 6.30 pm, 9.15 pm ಕತ್ತಿ (ತಮಿಳು) 10.15 am 4.00 pm
ಶಂಕರ್ ಬೈಂದೂರು 9880396909	ಕತ್ತಿ (ತಮಿಳು) 3 ದೇಖಾವೆಗಳು 2.00 pm, 6.00 pm, 9.00 pm